ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರದಲ್ಲಿ ನನ್ನ ಸ್ವಂತ ಪ್ರತಿಷ್ಠೆ ಏನಿಲ್ಲ. ಇದು ಪ್ರತಿಷ್ಠೆಯಂ ವಿಚಾರವೂ ಅಲ್ಲ.

ಶ್ರೀ ಜಿ. ಮಾದೇಗೌಡ —ಪ್ರತಿಷ್ಠೇ ಇರುವುದರಿಂದಲೇ ತಾವು ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ. ನಮಗೆಲ್ಲ ಗೊತ್ತಿದೆ ಇಂತಹ ಬಿಲ್‌ಗಳನ್ನು ಅಸೆಂಬ್ಲಿಯಲ್ಲಿ ಇಟ್ಟ ತಕ್ಷಣ ಪಾಸು ಮಾಡಿಕೊಳ್ಳುವುದುಂಟು ಅಥವಾ ಪರ್ಸಾನುಗಟ್ಟಲೆ ಮುಂದುವರಿಸತಕ್ಕಂಥಾದ್ದು ಉಂಟು. ಆದರೆ ಈ ಬಿಲ್ಲನ್ನು ಮಂಡನೆ ಮಾಡಿದ್ದೀರಿ. ಈ ಬಗ್ಗೆ ಅನೇಕ ಪತ್ರಿಕಾತಜ್ಞರು ಹೇಳಿದ್ದಾರೆ, ಕಾನೂನು ಪಂಡಿತರು ಹೇಳಿದ್ದಾರೆ, ಪ್ರತಿಯೊಬ್ಬರು ಹೇಳಿದ್ದಾರೆ, ನಾನು ಮೊದಲೇ ಹೇಳಿದ ಹಾಗೆ ನೀವು ಪ್ರತಿಷ್ಠೆಯ ಮೇಲೆ ನಿಂತಿದ್ದೀರಿ, ಚರ್ಚೆಯಾಗಬೇಕೆಂದು ಹೇಳುತ್ತೀರಿ ಆದರೆ ಚರ್ಚೆಗೆ ಒಪ್ಪಿಕೊಳ್ಳುವುದಿಲ್ಲವಲ್ಲ, ಯಾವಾಗ ಚರ್ಚೆಯಾಗಬೇಕೆನ್ನುವುದು ಸಹ ತಾವು ಹೇಳಲಿಲ್ಲ. ಅದಕ್ಕೆ ನಾವು ಈಗ ಈ ಬಿಲ್ ಬಗ್ಗೆ ಚರ್ಚೆಯಾಗಬೇಕೆಂದೂ ಒಂದು ರೆಸಲೂಷನ್ ಕಳುಹಿಸಿಕೊಟ್ಟಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕಂಥ ಬಿಲ್ ಶಾಸಕರ ಹಕ್ಕು ಚ್ಯುತಿಗೆ ಧಕ್ಕೆಯಾಗುತ್ತಾಗಿದೆ. ಪತ್ರಿಕಾ ಸ್ವಾತಂತ್ರ್ಯಕ್ಕೆ ಚ್ಯುತಿಯಾಗುತ್ತಾಗುತ್ತದೆ. ಈ ಮಸೂದೆ ಒಂದು ಕರಾಳ ಮಸೂದೆ ಎಂದೇ ನಾವು ಹೇಳಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳೇ ಹೇಳುತ್ತಾರೆ ಈ ಬಿಲ್ ಚರ್ಚೆಯಾಗಬೇಕೆಂದು ಆದರೆ ಅಧ್ಯಕ್ಷರು ಚರ್ಚೆಗೆ ಅವಕಾಶ ಕೊಡುವುದಿಲ್ಲ ಏಕೆ? ಮಾನ್ಯ ಮುಖ್ಯಮಂತ್ರಿಗಳು ಸ್ವತಂತ್ರ್ಯಕ್ಕಾಗಿ ಹೋರಾಟ ಮಾಡಿದವರು, ಸ್ವಾತಂತ್ರ್ಯಕ್ಕಾಗಿ ಜೈಲುವಾಸ ಅನುಭವಿಸಿರುವವರು, ಪತ್ರಿಕಾ ಸ್ವಾತಂತ್ರ್ಯಕ್ಕಾಗಿ 'ಹೋರಾಟ ಮಾಡಿರುವವರು ಎಮರ್ಜೆನ್ಸಿ ಪಿರಿಯಡ್‌ನಲ್ಲಿ ಜೈಲುವಾಸ ಅನುಭವಿಸಿರುವವರು, ದೇಶಕ್ಕೆ ಸ್ವಾತಂತ್ರ್ಯವನ್ನು ತಂದು ಕೊಡಲು ಹೋರಾಟ ಮಾಡಿದ ವ್ಯಕ್ತಿ ಪ್ರಜಾಪ್ರಭುತ್ವದಲ್ಲಿ ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವುದಕ್ಕೆ ಕರಾಳ ಶಾಸನವನ್ನು ತಂದಿರುವುದು ಸರಿಯಲ್ಲ. ಆದರೂ ಸಹ ಮಾನ್ಯ ಮುಖ್ಯಮಂತ್ರಿಗಳು ಈ ಶಾಸನವನ್ನು ವಾಪಸ್ ತೆಗೆದುಕೊಳ್ಳುವುದಿಲ್ಲವೆಂದು ಪ್ರತಿಷ್ಠೆಯ ಮೇಲೆ ನಿಂತಿದ್ದಾರೆ. ಚರ್ಚೆ ಮಾಡುವುದಕ್ಕಾದರೂ ಏತಕ್ಕೆ ಅವಕಾಶ ಕೊಡಬಾರದು ? ನಾನು ಹೇಳಿದಹಾಗೆ ಪ್ರತಿಷ್ಠೆ ಮೇಲೆ ನಿಂತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಮಂಡನೆ ಮಾಡಿರತಕ್ಕಂಥ ಶಾಸನದಲ್ಲಿ ಸುಮಾರು ೩೦ ಸೆಕ್ಷನ್ಸ್ ಇವೆ. ಈ ಸೆಕ್ಷನ್ಸ್‌ಗಳಲ್ಲಿ ಈಗಾಗಲೇ ಇರುವಂತೆ ಸಣ್ಣಪುಟ್ಟ ಕೆಲಂಗಳು, ಉಳಿದಿರತಕ್ಕಂಥಾವುಗಳು ಎಲ್ಲಾ ಫನಿಶ್‌ಮೆಂಟ್ ಕೊಡತಕ್ಕಂಥ ಕ್ಲಾಜ್‌ಗಳು, ಪೆನಾಲಿಟಿ ಹಾಕತಕ್ಕಂಥ ಕ್ಲಾಸ್‌ಗಳು ಮೆಂಬರ್ಸ್ ಹಕ್ಕನ್ನು ಮೊಟಕುಗೊಳಿಸತಕ್ಕಂಥಾವುಗಳು ಈ ಬಿಲ್ ಒಂದು ರೀತಿ ಫನಿಶ್‌ಮೆಂಟ್ ಬಿಲ್. ಎರಡನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವುದಿಲ್ಲವೆಂದು ಇದರಲ್ಲಿರತಕ್ಕಂಥ ಸೆಕ್ಷನ್ಸ್ ೨೨, ೨೩, ೨೬, ೨೭ ನೇರವಾಗಿ ಪನಿಶ್ ಮಾಡತಕ್ಕಂಥಾವುಗಳು ಇಲ್ಲಿ ತಾವು ಪ್ರಸ್ತಾಪ ಕೊಟ್ಟಿದ್ದೇವೆಂದು ಹೇಗೆ ಹೇಳುತ್ತೀರಿ ? ತಾವು ಪತ್ರಿಕಾರಂಗವನ್ನು ಮೊಟಕುಗೊಳಿಸುವಂತಹ ಬಿಲ್ ತಂದಿದ್ದೀರಿ. ಈ ಬಿಲ್‌ನ್ನು ವಾಪಸ್ ತೆಗೆದುಕೊಳ್ಳಿ ಎಂದು ಎಲ್ಲಾ ಪಕ್ಷದ ಸದಸ್ಯರು ಕೇಳುತ್ತಿದ್ದಾರೆ ನಿಮ್ಮ ಪಕ್ಷದ ಸಭೆಯಲ್ಲಿ ಕೇಳಿದ್ದಾರೆ. ಆದರೂ ಸಹ ಬಿಲ್ ವಾಪಸ್ ತೆಗೆದುಕೊಳ್ಳುವುದಿಲ್ಲವೆಂದು ಹೇಳುತ್ತಿದ್ದೀರಿ, ಈ ಬಿಲ್‌ನ್ನು ಸಾರ್ವಜನಿಕರ ಚರ್ಚೆಗೆ ಕಳುಹಿಸಿದ್ದೇನೆ, ಪಾಲ್ಕಿವಾಲಾ ಆ ರೀತಿ ಹೇಳಿದರು, ರಾಂ ಜೇಠ್ಮಲಾನಿಯವರು ಈ ರೀತಿ ಹೇಳಿದ್ದಾರೆಂದು ಸಮರ್ಥನೆಮಾಡಿಕೊಳ್ಳುವುದಕ್ಕೆ ಹೊರಟಿದ್ದಾರೆ. ವಾಪಸ್ ತೆಗೆದುಕೊಳ್ಳುವುದಿಲ್ಲವೆನ್ನುವ ಮನೋದೃಷ್ಟಿಯಿಂದಲಸಹ ಹೇಳಿದ್ದಾರೆ. ಇದನ್ನು ನಾವು ಖಂಡಿಸಿ ಅವರು ವಿತ್‌ಡ್ರಾ ಮಾಡಿಕೊಳ್ಳದೆ ಇರುವುದರಿಂದ ಪ್ರತಿಭಟಿಸಿ ಈ ಸಭೆಯಿಂದ ಹೊರಗಡೆ ಹೋಗುತ್ತೇವೆ.

(ಕಾಂಗ್ರೆಸ್ (ಐ) ಪಕ್ಷದ ಸದಸ್ಯರು ಸಭೆಯಿಂದ ಹೊರಗಡೆ ಹೋದರು)

ಅಧ್ಯಕ್ಷರು —ಇದು ಪರಿಶೀಲನೆಗೆ ತೆಗೆದುಕೊಳ್ಳುವ ವಿಷಯವಾದ್ದರಿಂದ ಮಾನ್ಯ ಸದಸ್ಯರು ಕಳುಹಿಸಿಕೊಟ್ಟಿದ್ದು ರೆಸಲ್ಯೂಶನ್ ಅನ್ನು ನಾನು ತಳ್ಳಿ ಹಾಕಿ ಚರ್ಚೆ ಮಾಡುವುದಕ್ಕೆ ಅನುಮತಿಯನ್ನು ನಿರಾಕರಣೆ ಮಾಡಿದ್ದೇನೆ. ಈಗ ಮಾನ್ಯ ಸದಸ್ಯರಾದ ಶ್ರೀ ವೆಂಕಟರಾಮಯ್ಯನವರು ಮಾತನಾಡಬಹುದು.